**ಆಯುಕ್ತರು**
ಕಾರ್ಮಿಕ ಆಯುಕ್ತರ ಕಛೇರಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

"ಕಾರ್ಮಿಕ ಭವನ", ಐಟಿಐ ಕಾಲೇಜ್ ಕಾಂಪೌಂಡ್
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029
ಕಛೇರಿ: 080 2975 3078
ಇಮೇಲ್ : labour.commissioner42@gmail.com

ಸಂಖ್ಯೆ:ಪಿ&ಎಸ್/ಎಸ್.ಸಿ.ಎ/ಸಿ.ಆರ್–07/2023–24 ದಿನಾಂಕ: 31–08–2023

**ಗೆ,**

ಅಧ್ಯಕ್ಷರು/ ಪ್ರಧಾನ ಕಾರ್ಯದರ್ಶಿಗಳು,
ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಷನ್, (KEA),
ನಂ. 74, 2ನೇ ಮಹಡಿ, ಶಂಕರ ಆರ್ಕೇಡ್, ವಾಣಿವಿಲಾಸ್ ರಸ್ತೆ,
ಬಸವನಗುಡಿ,
ಬೆಂಗಳೂರು–560004.

ಮಾನ್ಯರೇ,

**ವಿಷಯ:** ಕಾರ್ಮಿಕ ಇಲಾಖಾ ವತಿಯಿಂದ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961 ಇದಕ್ಕೆ ಸಂಬಂಧಿಸಿದ ನೋಂದಣಿ ಅಭಿಯಾನವನ್ನು ಕೈಗೊಂಡಿರುವ ವಿಷಯಕ್ಕೆ ತಮ್ಮ ಸಹಕಾರವನ್ನು ಕೋರಿ.

**ಉಲ್ಲೇಖ:**

1. ಮಾನ್ಯ ಕಾರ್ಮಿಕ ಸಚಿವರ ದಿನಾಂಕ: 24–06–2023 ರಂದು ಪ್ರಗತಿ ಪರಿಶೀಲನಾ ಸಭೆಯಲ್ಲಿ ನೀಡಿರುವ ನಿರ್ದೇಶನ.
2. ಮಾನ್ಯ ಕಾರ್ಮಿಕ ಆಯುಕ್ತರು ದಿನಾಂಕ; 18–08–2023 ರಂದು ನಡೆಸಿದ ಇಲಾಖಾ ಪ್ರಗತಿ ಪರಿಶೀಲನಾ ಸಂದರ್ಭದಲ್ಲಿ ನೀಡಿರುವ ನಿರ್ದೇಶನ.

*****

ಕಾರ್ಮಿಕ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961 ರ ಕಲಂ 4(1) & 3 ಹಾಗೂ ಕರ್ನಾಟಕ ನಿಯಮಗಳು 1963 ರ ನಿಯಮ 3 ರನ್ವಯ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಾದ ಹೋಟೆಲ್/ರೆಸ್ಟೋರೆಂಟ್ಸ್, ಬೇಕರಿ, ಕೆಫೆ, ಕಾರ್ಪೊರೇಟ್ ಕಛೇರಿಗಳು, ಐಟಿ/ಬಿಟಿ ಸಂಸ್ಥೆಗಳು, ಕಾರ್ಖಾನೆಗಳ ಕಾಯ್ದೆಯ ವ್ಯಾಪ್ತಿಗೆ ಒಳಪಡದ ಕಾರ್ಖಾನೆಗಳು ಸೇರಿದಂತೆ ಇತರೆ ಸಂಸ್ಥೆಗಳು ಪ್ರಾರಂಭವಾದ ದಿನಾಂಕದಿಂದ 30 ದಿನಗಳೊಳಗೆ ನಿಯಮಾನುಸಾರ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಈ ನೋಂದಣಿ ಪ್ರಕ್ರಿಯೆಯಿಂದ ಕಾಯ್ದೆ / ನಿಯಮಗಳ ಪಾಲನೆಯಾಗುತ್ತದೆ ಹಾಗೂ ಸದರಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ಸೇವಾ ಭದ್ರತೆ ನೀಡುವುದು, ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿ ಕಾನೂನು ಬದ್ಧ ಸೌಲಭ್ಯಗಳನ್ನು ಒದಗಿಸಿಕೊಡುವುದು ಈ ಕಾಯ್ದೆಯ ಉದ್ದೇಶವಾಗಿರುತ್ತದೆ. ಆದರೆ ಈವರೆಗೂ ಸದರಿ ಕಾಯ್ದೆಯಡಿ ಕಾರ್ಮಿಕ ಇಲಾಖೆಯಲ್ಲಿ ರಾಜ್ಯದ ಸುಮಾರು 3.90 ಲಕ್ಷ ಸಂಸ್ಥೆಗಳು ಮಾತ್ರ ನೋಂದಣಿಯಾಗಿದ್ದು, ಇದು ವಾಸ್ತವವಾಗಿ ಇರುವ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಿಗಿಂತ ತುಂಬಾ ಕಡಿಮೆಯಾಗಿರುತ್ತದೆ ಹಾಗೂ ಬಹುತೇಕ ಸಂಸ್ಥೆಗಳು ನೋಂದಣಿಯಾಗದೇ ಇರುವುದು ಕಂಡುಬಂದಿರುತ್ತದೆ. ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣಿ ಕಾನೂನು ಪ್ರಕಾರ ಕಡ್ಡಾಯವಾಗಿದ್ದು, ನೋಂದಣಿಯಾಗದೆ ಇದ್ದ ಪಕ್ಷದಲ್ಲಿ

ಮುಂದುವರೆದು, ರಾಜ್ಯದ ಇಂಧನ ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ಎಸ್ಕಾಂಗಳಲ್ಲಿ ವಾಣಿಜ್ಯ ಬಳಕೆಗೆ ವಿದ್ಯುತ್ ಸಂಪರ್ಕ ಪಡೆದ ಒಟ್ಟು 19 ಲಕ್ಷ ಸಂಸ್ಥೆಗಳಿದ್ದು ಸಣ್ಣ ಕೈಗಾರಿಕೆ (MSME) ವ್ಯಾಪ್ತಿಗೆ ಬರುವ 10 ಲಕ್ಷಕ್ಕು ಹೆಚ್ಚು ಸಂಸ್ಥೆಗಳು ಇರುವುದಾಗಿ ಅಂದಾಜಿಸಲಾಗಿದೆ. ಸದರಿ ವಿದ್ಯುತ್ ಸಂಪರ್ಕ ಪಡೆದ R.R ನಂಬರ್ ವಿವರಗಳನ್ನು ಪರಿಶೀಲಿಸಿದಾಗ ಕಾರ್ಮಿಕ ಇಲಾಖೆಯಲ್ಲಿ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣಿ ಪಡೆದಿರುವ ಸಂಖ್ಯೆ ಬಹಳ ಕಡಿಮೆಯಿರುತ್ತದೆ. ಆದ್ದರಿಂದ ತಮ್ಮ ಸಂಘದಲ್ಲಿ ನೋಂದಣಿಯಾಗಿರುವ ಎಲ್ಲಾ ಸದಸ್ಯ ಸಂಸ್ಥೆಗಳ ಉದ್ಯೋಗದಾತರಿಗೆ ನೋಂದಣಿ ಬಗ್ಗೆ ಅರಿವು ಮೂಡಿಸಿ ಕಡ್ಡಾಯವಾಗಿ ನೋಂದಣಿ ಮಾಡಿಸಿಕೊಳ್ಳಲು, ತಿಳುವಳಿಕೆ ನೀಡಬೇಕೆಂದು ಹಾಗೂ ಕಾರ್ಮಿಕ ಇಲಾಖೆಯು ಹಮ್ಮಿಕೊಂಡಿರುವ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣಿ ಅಭಿಯಾನಕ್ಕೆ ಸಹಕರಿಸಲು ಕೋರಿದೆ.

ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳನ್ನು ನೋಂದಣಿ ಮಾಡುವ ವಿಧಾನವನ್ನು ಈ ಪತ್ರದೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ.

ತಮ್ಮ ವಿಶ್ವಾಸಿ

Gopalk

ಆಯುಕ್ತರು
ಕಾರ್ಮಿಕ ಇಲಾಖೆ

## ಸಂಸ್ಥೆಗಳನ್ನು ಆನ್‌ಲೈನ್ ಮುಖೇನ ಸರಳವಾಗಿ ನೋಂದಣಿ ಮಾಡುವ ವಿಧಾನ:-

ಎಲ್ಲಾ ಅಂಗಡಿ & ವಾಣಿಜ್ಯ ಸಂಸ್ಥೆಗಳ ಮಲೀಕರು ಕಾರ್ಮಿಕ ಇಲಾಖೆಯ ಅಭಿವೃದ್ಧಿಪಡಿಸಿರುವ www.ekarmika.karnataka.gov.in/ekarmika/static/home.aspx ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ತಮ್ಮ ಸಂಸ್ಥೆಯ ವಿಳಾಸ, ಮಾಲೀಕರ ಹೆಸರು, ವ್ಯಾಪಾರದ ಸ್ವರೂಪ ಮಾಹಿತಿಗಳನ್ನು ನಮೂದಿಸಿ, ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿ ಆನ್‌ಲೈನ್ ಶುಲ್ಕವನ್ನು ಪಾವತಿಸಬಹುದಾಗಿದೆ ಮತ್ತು ಅಗತ್ಯ ದಾಖಲಾತಿಗಳನ್ನು ಆನ್‌ಲೈನ್ ಮುಖೇನ ಸಲ್ಲಿಸಿ ನೋಂದಣಿ ಪತ್ರವನ್ನು ಸಹ ಆನ್‌ಲೈನ್ ಮುಖೇನ ಪಡೆದುಕೊಳ್ಳಬಹುದಾಗಿರುತ್ತದೆ. ಈ ನೋಂದಣಿಯು ಮುಂದಿನ 5 ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ.

- **ನೋಂದಣಿಗೆ ಬೇಕಾದ ಅಗತ್ಯ ದಾಖಲೆಗಳು:-**

1. ಅಂಗಡಿ / ಸಂಸ್ಥೆಯ ವಿಳಾಸ
2. ಮಾಲೀಕರ ಗುರುತಿನ ಚೀಟಿ

- **ನೋಂದಣಿ ಶುಲ್ಕದ ವಿವರ:-**

| ನೋಂದಣಿ ಶುಲ್ಕ | |
|---|---|
| **ಕಾರ್ಮಿಕರ ಸಂಖ್ಯೆ** | **ಶುಲ್ಕ (ರೂ.ಗಳಲ್ಲಿ)** |
| ಕಾರ್ಮಿಕರಿಲ್ಲದ ಸಂಸ್ಥೆಗಳಿಗೆ | 300/- |
| 1 ರಿಂದ 9 ಕಾರ್ಮಿಕರು | 600/- |
| 10 ರಿಂದ 19 ಕಾರ್ಮಿಕರು | 4000/- |
| 20 ರಿಂದ 49 ಕಾರ್ಮಿಕರು | 10000/- |
| 50 ರಿಂದ 99 ಕಾರ್ಮಿಕರು | 20000/- |
| 100 ರಿಂದ 250 ಕಾರ್ಮಿಕರು | 40000/- |
| 251 ರಿಂದ 500 ಕಾರ್ಮಿಕರು | 50000/- |
| 501 ರಿಂದ 1000 ಕಾರ್ಮಿಕರು | 70000/- |
| 1001 ಕ್ಕಿಂತ ಹೆಚ್ಚು ಕಾರ್ಮಿಕರು | 75000/- |

**ಸೂಚನೆ:-** ನೋಂದಣಿ ಮಾಡುವ ಪ್ರಕ್ರಿಯೆಯಲ್ಲಿ ಯಾವುದೇ ವ್ಯತ್ಯಾಸ / ಸಮಸ್ಯೆ ಕಂಡುಬಂದಲ್ಲಿ ಇಲಾಖೆಯ ಸಹಾಯವಾಣಿ 080-29753059 ಅಥವಾ 155214 ಹಾಗೂ ಇ-ಮೇಲ್ ವಿಳಾಸ: ekarmikalabour@gmail.com ಮತ್ತು ಕಾರ್ಮಿಕ ಇಲಾಖೆಯ ಅಧಿಕೃತ ಜಾಲತಾಣ karmikaspandana.karnataka.gov.in ವೆಬ್‌ಸೈಟ್ನಲ್ಲಿ ಕ್ಷೇತ್ರವಾರು, ಅಧಿಕಾರಿ / ಕಾರ್ಮಿಕ ನಿರೀಕ್ಷಕರ ಹೆಸರು, ದೂರವಾಣಿ ಸಂಖ್ಯೆ ವಿವರಗಳನ್ನು ಪ್ರಕಟಿಸಿದ್ದು, ಇವರುಗಳ ಸಹಾಯವನ್ನು ಪಡೆದು ಅಂಗಡಿ & ವಾಣಿಜ್ಯ ಸಂಸ್ಥೆಗಳನ್ವಯ ನೋಂದಣಿಯನ್ನು ಮಾಡಿಸಬಹುದಾಗಿರುತ್ತದೆ.